# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆಃ 60/2024

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಇರ್ಫಾನ್ | ಸಿಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | – | ಹುಸೇನ್ ಸಾಬ್ | ಪಿಡಬ್ಲ್ಯೂ-4 |
| ವಯಸ್ಸು | – | ಸು.38 ವರ್ಷ | ಪ್ರ.ವ.ಬೋ ದಿನಾಂಕಃ21.05.2025 |
| ಉದ್ಯೋಗ | – | ಗಾರೆ ಕೆಲಸ | |
| ವಾಸ | – | ಧರ್ಮಪುರ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ-**

ಸಾಕ್ಷಿಗೆ ನಿಪಿ-2 ರಿಂದ 4 ರ ದಾಖಲೆಗಳನ್ನು ತೋರಿಸಿದ್ದು, ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ಸದರಿ ಸಹಿಯನ್ನು **ನಿಪಿ-2(ಸಿ) ನಿಪಿ-3(ಸಿ) ಮತ್ತು ನಿಪಿ-4(ಸಿ)** ಎಂದು ಗುರುತಿಸಲಾಯಿತು. ಈಗ 3-4 ವರ್ಷಗಳ ಹಿಂದೆ ಅಬ್ಬಿನಹೊಳೆ ಪೊಲೀಸ್ ಠಾಣೆ ನಿಪಿ-2 ರಿಂದ 4 ಕ್ಕೆ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ನಕಾಶೆ ತಯಾರಿಸಿರುವುದಿಲ್ಲ ಮತ್ತು ಯಾವುದೇ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಿಪಿ-2 ರಿಂದ 4 ರಿಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ-ಸವಾಲುಃ ಮಾನ್ಯ ಎಪಿಪಿಯವರಿಂದಃ-**

ದಿನಾಂಕಃ14.09.2023 ರಂದು ಅಪಘಾತ ಸ್ಥಳದಲ್ಲಿ ಪೊಲೀಸ್‌ರು ಬಂದಿದ್ದು ಅಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿ ನಿಪಿ-3 ರಂತೆ ಕಚ್ಚಾ

ನಕಾಶೆಯನ್ನು ತಯಾರಿಸಿ ಸ್ಥಳದಲ್ಲಿದ್ದ ಲಾರಿ ಸಂಖ್ಯೆ KA-06-Y-1915 ಮೋಟಾರ್ ಸೈಕಲ್‌ನ್ನು ನಮ್ಮ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.ಅದೇ ದಿನ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿಪಿ-4 ರಂತೆ ವಾಹನ ಪರಿಶೀಲನಾ ಪಂಚನಾಮೆಯನ್ನು ಬೆ.11.00 ರಿಂದ 12.00 ಗಂಟೆ ಯವರೆಗೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ಪಂಚನಾಮೆಯನ್ನು ಬೆ.9.00 ರಿಂದ 10.00 ಗಂಟೆ ಯವರೆಗೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ-ಸವಾಲುಃ ಆರೋಪಿ ಪರ. ಶ್ರೀ.ಎ ಆರ್ ವೈ ವಕೀಲರಿಂದಃ**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.